ಇದು ಟ್ರೆಂಡಿ ಹೌದಾದರೂ, ನೀಳ ನಿಲುವಂಗಿಯ ಮೇಲೆ ವೇಯ್ಸ್ಟ್ ಕೋಟ್ ಹಾಕಿಕೊಳ್ಳುವ ಹಳೆಯ ಜಾಯಮಾನವನ್ನು ಅಳವಡಿಸಿಕೊಂಡ ಫ್ಯಾಷನ್ ಪರಿಣತರೂ ಇದ್ದಾರೆ.

ಹಿಂದಿ ಚಿತ್ರನಟ ರಣವೀರ್ ಸಿಂಗ್ ಫ್ಯಾಷನ್ ವಿಷಯದಲ್ಲಿ ಅತಿಯಾಗಿ ಪ್ರಯೋಗಕ್ಕೆ ಒಡ್ಡಿಕೊಳ್ಳುತ್ತಿರುವವರು. ಅವರು ತೊಟ್ಟ ಎಷ್ಟೋ ವಸ್ತ್ರಗಳನ್ನು ಕಂಡು, 'ಯಪ್ಪಾ...ಇವರಿಗೆ ಏನಾಗಿದೆ' ಎಂದವರ ಸಂಖ್ಯೆ ದೊಡ್ಡದಿದೆ. ಆದರೆ, ಗುಂಪಿನ ನಡುವೆ ಇದ್ದರೂ ಎದ್ದುಕಾಣಬೇಕು ಎಂಬ ಹುಕಿ ಈ ರೀತಿ ವಸ್ತ್ರ ತೊಡುವುದರ ಹಿಂದೆ ಅಡಗಿದೆ. ರಣವೀರ್ ಸಿಂಗ್ ಹಾಗೂ ದೀಪಿಕಾ ಪಡುಕೋಣೆ ವಿವಾಹ ನಂತರದ ಪಾರ್ಟಿಯೊಂದಕ್ಕೆ ವಿನ್ಯಾಸಕ ಮನೀಷ್ ಅರೋರಾ ವಿಲಕ್ಷಣವಾದ ವಸ್ತ್ರವನ್ನು ರೂಪಿಸಿ ಕೊಟ್ಟಿದ್ದರು. ಕಪ್ಪು ಬಣ್ಣದ ಉದ್ದದ ಕೋಟ್. ಅದರ ಮೇಲೆ ಕಡುಗುಲಾಬಿ ಬಣ್ಣದ, ಮಕಮಲ್ಲಿನಿಂದ ಮಾಡಿದ ಪುಟ್ಟ ಪುಟ್ಟ ಹೃದಯಗಳ ಆಕಾರ. ಅದಕ್ಕೆ ನೀಲಿ ಬಣ್ಣದ ಲೇಸ್‌ವರ್ಕ್‌ನ ಚೌಕಟ್ಟು. ಕತ್ತಿನ ತುಂಬಾ ಫಳಫಳ್ಳೆನ್ನುವ ಬೆರಳು ಗಾತ್ರದ ಸರಗಳು. ಸಣ್ಣಗೆ ಮೇಲ್ಭಾಗಕ್ಕೆ ತಿರುಚಿದ ರಾಜಾಮೀಸೆ. ಕೈಗಳನ್ನು ಮುಚ್ಚಿದ ಭಾಗಗಳಂತೂ ಕಡುಗುಲಾಬಿ ಬಣ್ಣದಿಂದ ಎದ್ದುಕಂಡವು.

ರಣವೀರ್ ಸಿಂಗ್ ಇಂಥ ಉಡುಪನ್ನು ತೊಟ್ಟಮೇಲೆ ಮನೀಷ್ ಹೇಳಿದ್ದು: 'ಈ ರೀತಿಯ ಪ್ರಯೋಗಗಳನ್ನು ಅವರ ಮೇಲಷ್ಟೇ ಮಾಡಲು ಸಾಧ್ಯ. ಅವರ ಮುಖದಲ್ಲಿ ಪುರುಷ ಕಳೆಯಿದೆ. ಕಣ್ಣಲ್ಲಿ ತುಂಟತನವಿದೆ. ತೊಟ್ಟ ವಸ್ತ್ರದ ಉದ್ದೇಶವನ್ನು ಅವರು ಮುಖಭಾವದಲ್ಲೇ ತುಳುಕಿಸುತ್ತಾರೆ. ಹೀಗಾಗಿ ಇಂಥ ವಸ್ತ್ರ ಪ್ರಯೋಗಗಳನ್ನು ಅವರ



ಮೇಲೆ ಮಾಡಿದರೆ ಹುಚ್ಚುತನ ಎನಿಸುವುದಿಲ್ಲ'. ಕೆಲವು ವರ್ಷಗಳಿಂದ ಬ್ಲೇಜರ್‌ಗಳನ್ನು ಪಾರ್ಟಿಗಳಿಗೆ ಬಳಸುವುದು ಚಾಲ್ತಿಗೆ ಬಂತು. ಹೃತಿಕ್ ರೋಷನ್ ಪ್ರಮುಖ ಪಾರ್ಟಿಗಳಿಗೆ ಜೀನ್ಸ್ ಮೇಲೆ ವಿವಿಧ ಬಣ್ಣಗಳ ಜಾಕೆಟ್‌ಗಳನ್ನು ತೊಡುತ್ತಿದ್ದುದನ್ನು ಕಾಣಬಹುದಿತ್ತು. ಈಗ ಮಂಡಿಯ ಭಾಗದಲ್ಲಿ ಹರಿದ ನೀಲಿ ಜೀನ್ಸ್ ಮೇಲೆ ಅದಕ್ಕೆ ತದ್ವಿರುದ್ಧ ಎನ್ನುವಂಥ ಬಣ್ಣದ ಬ್ಲೇಜರ್ ಅಥವಾ ಜಾಕೆಟ್ ತೊಡುವುದು ಫ್ಯಾಷನ್ ಆಗಿದೆ. ಚಳಿಗಾಲದಲ್ಲಿ ರಾತ್ರಿ ಪಾರ್ಟಿಗೆ ತೆರಳುವವರು ಬ್ಲೇಜರ್‌ನ ಬದಲಿಗೆ ಬಾಂಬರ್‌ಗಳನ್ನು, ದೇಹಾಕಾರಕ್ಕೆ ಒಗ್ಗಿಕೊಳ್ಳಬಲ್ಲ ಚರ್ಮದ ಜಾಕೆಟ್‌ಗಳನ್ನು ತೊಡುತ್ತಾರೆ. ಇಂಥ ಜಾಕೆಟ್‌ಗಳು ಪಾರ್ಟಿ ನಡೆಯುವ ಸ್ಥಳದ ಬೆಳಕಿನಲ್ಲಿ ಮಿರಮಿರ ಮಿಂಚುತ್ತವೆ.

ಪುರುಷರ ಪಾರ್ಟಿ ಉಡುಗೆಗಳನ್ನು ಸಾಮಾನ್ಯವಾಗಿ ಹತ್ತಿ, ಟೆರಿಕಾಟ್ ಮಿಶ್ರಿತ ಹತ್ತಿ ಬಟ್ಟೆಗಳಲ್ಲೇ ತಯಾರಿಸುತ್ತಿದ್ದ ಕಾಲವೊಂದಿತ್ತು. ಈಗ ಕಾಟನ್ ಎನ್ನುವುದರಲ್ಲೇ ಹಲವು ಬಗೆಗಳಿವೆ. 'ಗಿಜ್ಜಾ ಕಾಟನ್' ಎನ್ನುವ ಬಗೆಯು ದೇಹಾಕಾರಕ್ಕೆ ತಕ್ಕಂತೆ ಬದಲಾಗುವ ನೂಲುಗಳನ್ನು ಒಳಗೊಂಡಿದೆ. ಕಾಟನ್ ಸಿಲ್ಕ್, ಲೈನನ್ ಹಾಗೂ ಟೆರಿಕಾಟ್ ಎಲ್ಲವನ್ನೂ ಬೆರೆಸಿದಂಥ ವಸ್ತ್ರಗಳೂ ಈಗ ಟ್ರೆಂಡ್. ಅಗತ್ಯಕ್ಕೆ ತಕ್ಕಷ್ಟು ಮಕಮಲ್ಲಿನ ಬಟ್ಟೆಗಳನ್ನೂ ಬಳಸುವವರೂ ಇದ್ದಾರೆ.

ಜೀನ್ಸ್ ಮೇಲೆ ಜಾಕೆಟ್ ಹಾಕುವವರು ಕೂಡ ತೊಡುವ ಶೂಸ್ ಕಡೆಗೆ ಗಮನ ಹರಿಸುತ್ತಾರೆ. ಅದು ಒಂದೋ ಜಾಕೆಟ್‌ಗೆ ಹೊಂದುವ ಬಣ್ಣದ್ದಾಗಿರುತ್ತದೆ. ಇಲ್ಲವೋ ಸ್ನೀಕರ್ ಕೂಡ ಆಗಬಲ್ಲದು. ಇದೊಂದು ರೀತಿ 'ಸೆಮಿ ಫಾರ್ಮಲ್ ಫೀಲ್' ಕೊಡುತ್ತದೆ. ಹತ್ತಿಗೆ ರೇಷ್ಮೆಯ ನೂಲುಗಳನ್ನು ಬೆರೆಸಿದ ಬಟ್ಟೆಗಳಿಗೆ ವಿಶೇಷವಾದ ಮೆರುಗು ಬರುತ್ತದೆ. ಅವುಗಳ ಮೇಲೆ ಬೆಳಕು ಬಿದ್ದಾಗ ಗಮನಸೆಳೆಯುವ ಪರಿಣಾಮ ಉಂಟಾಗುತ್ತದೆ. ಇತ್ತೀಚೆಗೆ ಬ್ಲೇಜರ್‌ಗಳ ಮೇಲೆ ದೊಡ್ಡ ದೊಡ್ಡ ಚೌಕಾಕಾರಗಳಿರುವ ಚಿತ್ತಾರಗಳನ್ನೂ ಕಾಣಬಹುದು. ಸ್ಟೋಲ್ ಜಾಗದಲ್ಲಿ ದುಪಟ್ಟಾವನ್ನೇ ಹೋಲುವಂಥ ದೊಡ್ಡ ವಸ್ತ್ರಗಳನ್ನು ತೊಡುವುದೂ ಫ್ಯಾಷನ್.

ಸರಳವಾಗಿ ಕಾಣಬೇಕೆಂಬುದು ಕೆಲವರ ಸಂಕಲ್ಪ. ಹಾಗಂತ ಪಾರ್ಟಿಯಲ್ಲಿ ಮಂಕು ಕವಿದಹಾಗೆ ಇರಕೂಡದು ಎನ್ನುವುದು ಎಚ್ಚರ. ಅಥವರು ಶಾರ್ಟ್ ಕುರ್ತಾಗಳನ್ನು ತೊಡುತ್ತಾರೆ. ಬಿಳಿ, ನೀಲಿ, ಗುಲಾಬಿ, ಗೋಡಂಬಿ ಬಣ್ಣದ ವಸ್ತ್ರಗಳು ಅವರ ಆಯ್ಕೆಯಾಗಿರುತ್ತವೆ. 'ಫ್ಯಾಬ್ ಇಂಡಿಯಾ' ತರಹದ ದೇಸಿ ಉತ್ಪನ್ನಗಳ ಕಂಪನಿಯು ಇಂತಹ ಗ್ರಾಹಕರನ್ನು ಸೆಳೆಯುತ್ತಿದೆ. ಬಟ್ಟೆ ಯಾವ ಬಣ್ಣದ್ದಾಗಿರುತ್ತದೆಯೋ ಅದೇ ಬಣ್ಣದಲ್ಲಿ ಸೂಕ್ಷ್ಮ ಕುಸುರಿಯನ್ನೂ ಇಂತಹ ವಸ್ತ್ರಗಳಿಗೆ ಮಾಡಿರುತ್ತಾರೆ. ಹೆಣ್ಣು, ಗಂಡು ಇಬ್ಬರೂ ತೊಡಬಹುದಾದ ಮಾದರಿಯ 'ಯೂನಿಸೆಕ್ಸ್' ವಸ್ತ್ರಗಳ ಬಗೆಯೂ ಚಾಲ್ತಿಯಲ್ಲಿದೆ. ಅಳತೆಯಲ್ಲಿ ಮಾರ್ಪಾಟು ಎನ್ನುವುದನ್ನು ಬಿಟ್ಟರೆ ವಸ್ತ್ರಗಳ ಸ್ವರೂಪ, ಬಣ್ಣ, ವಿನ್ಯಾಸದಲ್ಲಿ ಸಾಮ್ಯತೆ ಇರುತ್ತದೆ.

ಇಷ್ಟೆಲ್ಲ ವೈವಿಧ್ಯವಿದ್ದೂ ಧೋತಿ, ನಿಲುವಂಗಿ, ವೇಯ್ಸ್ಟ್ ಕೋಟ್ ಅಥವಾ ಜಾಕೆಟ್ ತೊಡುವ ಮಿಸಳಭಾಜಿ ಫ್ಯಾಷನ್ ಅನ್ನೂ ಪಾರ್ಟಿಗಳಲ್ಲಿ ಕಾಣಬಹುದು. ಒಂದಂತೂ ನಿಜ, ಪಾರ್ಟಿಗಳಿಗೆ ತೊಡುವ ಉಡುಗೆಗಳನ್ನು ಕಚೇರಿ ಕೆಲಸದ ಸಂದರ್ಭದಲ್ಲಂತೂ ಹಾಕಲು ಸಾಧ್ಯವೇ ಇಲ್ಲ. ■

## ನನ್ನ ಕನ್ನಡ

**ನಿರುಪಮಾ ರಾಜೇಂದ್ರ,**
ನೃತ್ಯಗಾರ್ತಿ



## ಔದಾರ್ಯ ಕಲಿಸಿದ ಕನ್ನಡ

**ಅಮೆರಿಕದ** 'ಅಕ್ಕ' ಅಥವಾ 'ನಾವಿಕ' ಆಗಿರಬಹುದು, ಯುಕೆನಲ್ಲಿರುವ 'ಕನ್ನಡ ಬಳಗ' ಆಗಿರಬಹುದು. ನನ್ನಂಥ ಕನ್ನಡತಿಯನ್ನು ಕರೆದು ವಿದೇಶಗಳಲ್ಲಿ ನೃತ್ಯ ಮಾಡಲು ಅವಕಾಶ ಕೊಡುತ್ತದೆ ಅಂದರೆ ನನ್ನ ಮತ್ತು ಆ ಸಂಘಟನೆ ನಡುವೆ ಸ್ನೇಹಸೇತುವೆಯಾಗಿರುವುದು ಸಿಹಿಗನ್ನಡವೇ. ನೃತ್ಯಕ್ಕೆ ಕನ್ನಡದ ಹಲವು ಕೃತಿಗಳೇ ಆಧಾರ. ಈಚೆಗೆ ಕುಮಾರವ್ಯಾಸ ಭಾರತವನ್ನು ಆಧರಿಸಿಕೊಂಡು ಮಹಾಭಾರತದ ಪ್ರಸಂಗವನ್ನು ಮರುಸೃಷ್ಟಿ ಮಾಡಿದ್ದೇವೆ. ಕಲಾವಿದಳಾಗಿ ಕನ್ನಡದ ಸಾಹಿತ್ಯ ನನಗೆ ದೊಡ್ಡ ಆಗರವೇ ಸರಿ. ನನ್ನ ತಂದೆ ಕನ್ನಡ ನಾಡು ನುಡಿಗಾಗಿ ಹಲವು ಗೀತೆಗಳನ್ನು ರಚಿಸಿದ್ದಾರೆ. ಏಕೀಕರಣದ ಸಂದರ್ಭದಲ್ಲಿ ಅವರು ಬರೆದ ಹಾಡುಗಳು ಶಾಲೆಗಳಲ್ಲೂ ಜನಜನಿತವಾಗಿದ್ದವು. ಇಂಥ ಪರಿಸರದಲ್ಲಿ ಬೆಳೆದ ನನಗೆ ಕನ್ನಡ ಔದಾರ್ಯವನ್ನು ಕಲಿಸಿದೆ.

ತಮಿಳು ಮಾತನಾಡುವ ಕುಟುಂಬದ ಮೂಲದಿಂದ ಬಂದಿದ್ದರೂ, ಸೇರಿದ್ದು ಅಪ್ಪಟ ಕನ್ನಡ ಮಾತನಾಡುವ ರಾಜೇಂದ್ರರ ಕುಟುಂಬಕ್ಕೆ. ಅವರದ್ದು ಹರಿಕಥಾ ಪರಂಪರೆ. ಹಾಗಾಗಿ ಕನ್ನಡ ನನಗೆಂದೂ ಅನ್ಯ ಭಾಷೆ ಎನಿಸಿಲ್ಲ. ಅದು ನಾನು ಬದುಕುತ್ತಿರುವ ಭಾಷೆ. ಜಾಗತಿಕವಾಗಿ ಏನೇ ಕಲಿತರೂ ಮನೆಯಲ್ಲಿ ಕನ್ನಡದ ವಾತಾವರಣವಿದ್ದರೆ, ಆ ಮಕ್ಕಳು ಕನ್ನಡದ್ದೇ ಆಗುತ್ತವೆ ಎನ್ನುವುದರಲ್ಲಿ ನನಗೆ ನಂಬಿಕೆ ಹೆಚ್ಚು.